# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆಶ್ರಯ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ.

— —

**ಓದಲಾಗಿದೆ:-**

೧) ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಯುಡಿ ೫೩೫ ಕೆಹೆಚ್‌ಬಿ ೯೧, ದಿನಾಂಕ ೩೦-೧೨-೧೯೯೧
೨) ಸರ್ಕಾರಿ ಆದೇಶ ಸಂಖ್ಯೆ: ವಇ ೭೧ ಹೆಚ್‌ಎಎಸ್ ೯೬, ದಿನಾಂಕ ೬-೧೦-೧೯೯೭

**ಪ್ರಸ್ತಾವನೆ:-**

ಮೇಲೆ ಕ್ರಮ ಸಂಖ್ಯೆ (೧) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ವಿಧಾನಸಭಾ ಕ್ಷೇತ್ರ ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಯನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಶ್ರಯ ಯೋಜನೆಯನ್ನು ಆಯಾ ವಿಧಾನಸಭಾ ಕ್ಷೇತ್ರಗಳಲ್ಲಿ ಜಾರಿಗೊಳಿಸಲು ರಚಿಸಲಾಗಿತ್ತು. ಸದರಿ ಸಮಿತಿಗಳಿಗೆ ಆಯಾ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿದ್ದರು.

ಮೇಲೆ ಕ್ರಮ ಸಂಖ್ಯೆ (೨) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶ ಸಂಖ್ಯೆ: ವಇ ೭೧ ಹೆಚ್‌ಎಎಸ್ ೯೬(ಭಾಗ) ರಲ್ಲಿ ತಾಲ್ಲೂಕುವಾರು ಆಶ್ರಯ ಸಮಿತಿಗಳನ್ನು ರಚಿಸಲು ಆದೇಶಿಸಲಾಗಿತ್ತು. ಆದರಲ್ಲಿ ತಾಲ್ಲೂಕಿನ ಹೆಚ್ಚು ಪ್ರದೇಶಗಳನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರು ಸಮಿತಿಯ ಅಧ್ಯಕ್ಷರಾಗಿದ್ದರು.

ಈಗ, ಸರ್ಕಾರವು ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಆಶ್ರಯ ಸಮಿತಿಗಳನ್ನು ಪುನರ್ ರಚಿಸುವ ವಿಷಯವನ್ನು ಪರಿಶೀಲಿಸಿ ಆ ಸಮಿತಿಗಳನ್ನು ವಿಧಾನಸಭಾ ಕ್ಷೇತ್ರವಾರು ಇರುವಂತೆ ಪುನರ್ ರಚಿಸಲು ನಿರ್ಧರಿಸಿದೆ. ಆದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಇ ೪೨ ಹೆಚ್‌ಎಎಂ ೯೯, ಬೆಂಗಳೂರು ದಿನಾಂಕ ೧೦-೫-೨೦೦೦**

ಮೇಲ್ಕಂಡ ಸಂದರ್ಭದಲ್ಲಿ, ಸರ್ಕಾರವು ಈ ವಿಷಯದಲ್ಲಿ ಈ ಹಿಂದೆ ಹೊರಡಿಸಿದ ಎಲ್ಲಾ ಆದೇಶಗಳನ್ನು ರದ್ದುಗೊಳಿಸಿ ಆಶ್ರಯ ಸಮಿತಿಗಳನ್ನು ವಿಧಾನಸಭಾ ಕ್ಷೇತ್ರವಾರು ಇರುವಂತೆ ಪುನರ್ ರಚಿಸಲು ಈ ಮೂಲಕ ಆದೇಶಿಸಿದೆ. ಯಾವ ವಿಧಾನಸಭಾ ಕ್ಷೇತ್ರದಲ್ಲಿ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳು ಇರುವವೋ, ಅಂತಹ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕ ಆಶ್ರಯ ಸಮಿತಿಗಳು ಇರತಕ್ಕದ್ದು. ಈ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರ ಹಾಗೂ ಕರ್ತವ್ಯಗಳು ಈ ಕೆಳಕಂಡಂತಿವೆ :

**ಸದಸ್ಯರು:**

| | | |
|---|---|---|
| ೧) ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರು | — | ಅಧ್ಯಕ್ಷರು |
| ೨) ಆ ಪ್ರದೇಶದ ವಿಧಾನ ಪರಿಷತ್ತಿನ ಸದಸ್ಯರು | — | ಸದಸ್ಯರು |
| ೩) (ಅ) ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು (ಗ್ರಾಮೀಣ ಆಶ್ರಯ ಸಮಿತಿಗಳಿಗಾಗಿ ) | — | ಸದಸ್ಯರು |
| (ಆ) ಪುರಸಭೆ : ನಗರಸಭೆಗಳ ಅಧ್ಯಕ್ಷರು : ಮಹಾನಗರಪಾಲಿಕೆಯ ಮಹಾಪೌರರು . ಅಥವಾ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಪಟ್ಟಣ ಪ್ರದೇಶಕ್ಕೆ ಸಂಬಂಧಪಟ್ಟ ಪ್ರದೇಶದ ಮಹಾನಗರಪಾಲಿಕೆಯ ಪ್ರತಿನಿಧಿ (ನಗರ ಆಶ್ರಯ ಸಮಿತಿಗಾಗಿ ) | — | ಸದಸ್ಯರು |

೪) (ಅ) ತಾಲ್ಲೂಕು ಪಂಚಾಯತ್‌ನ ಕಾರ್ಯ ನಿರ್ವಾಹಕ ಅಧಿಕಾರಿ — ಸದಸ್ಯ ಕಾರ್ಯದರ್ಶಿ (ಗ್ರಾಮೀಣ ಆಶ್ರಯ ಸಮಿತಿಗಾಗಿ)

(ಆ) ಪುರಸಭೆಯ ಮುಖ್ಯಾಧಿಕಾರಿ ಅಥವಾ ನಗರಸಭೆಯ ಆಯುಕ್ತರು (ಬೆಂಗಳೂರು ಮಹಾನಗರಪಾಲಿಕೆಗೆ ಆಯುಕ್ತರು, ನಾಮ ನಿರ್ದೇಶನ ಮಾಡುವ ಉಪ ಆಯುಕ್ತರು) — ಸದಸ್ಯ ಕಾರ್ಯದರ್ಶಿ (ನಗರ ಆಶ್ರಯ ಸಮಿತಿಗಾಗಿ)

೫) ಸಂಬಂಧಪಟ್ಟ ಕಂದಾಯ ವಿಭಾಗದ ಉಪ ವಿಭಾಗಾಧಿಕಾರಿ — ಸದಸ್ಯರು

೬) ಆಯಾ ತಾಲ್ಲೂಕಿನ ತಹಶೀಲ್ದಾರರು — ಸದಸ್ಯರು

<u>ಅಧಿಕಾರೇತರ ಸದಸ್ಯರು:—</u>

೧) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿನಿಧಿ — ಸದಸ್ಯರು

೨) ಹಿಂದುಳಿದ ವರ್ಗದ ಪ್ರತಿನಿಧಿ — ಸದಸ್ಯರು

೩) ಅಲ್ಪಸಂಖ್ಯಾತರ ಪ್ರತಿನಿಧಿ. — ಸದಸ್ಯರು

೪) ಬಹು ಸಂಖ್ಯಾತರ ವರ್ಗದ ಪ್ರತಿನಿಧಿ — ಸದಸ್ಯರು
(ಮೇಲಿನ ಅಧಿಕಾರೇತರ ಸದಸ್ಯರುಗಳಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು).

ಆಶ್ರಯ ಸಮಿತಿಗಳಿಗೆ ವಿಧಾನ ಪರಿಷತ್ ಸದಸ್ಯರನ್ನು ನಾಮ ನಿರ್ದೇಶನ ಮಾಡುವಾಗ ಈ ಕೆಳಕಂಡ ತತ್ವಗಳನ್ನು ಆಧರಿಸಿ ನಾಮ ನಿರ್ದೇಶನ ಮಾಡಬೇಕು.

೧. ವಿಧಾನ ಪರಿಷತ್ತಿನ ಸದಸ್ಯರು ಒಂದಕ್ಕಿಂತ ಹೆಚ್ಚು ಆಶ್ರಯ ಸಮಿತಿಯ ಸದಸ್ಯರಾಗುವಂತಿಲ್ಲ.

೨. ಪ್ರತಿಯೊಂದು ಆಶ್ರಯ ಸಮಿತಿಯು ಒಬ್ಬರಿಗಿಂತ ಹೆಚ್ಚು ವಿಧಾನ ಪರಿಷತ್ ಸದಸ್ಯರನ್ನು ಹೊಂದಿರುವಂತಿಲ್ಲ.

೩. ಪದವೀಧರ ಕ್ಷೇತ್ರ : ಶಿಕ್ಷಕರ ಕ್ಷೇತ್ರ : ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದಂತಹ ವಿಧಾನ ಪರಿಷತ್ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಬರುವ ಒಂದು ಆಶ್ರಯ ಸಮಿತಿಯನ್ನು ಆಯ್ಕೆ ಮಾಡಿಕೊಳ್ಳಬೇಕು.

೪. ವಿಧಾನ ಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ನಾಮ ನಿರ್ದೇಶನಗೊಂಡ ಸದಸ್ಯರು ತಮ್ಮ ಸ್ವಂತ ಜಿಲ್ಲೆಯಲ್ಲಿ ಬರುವಂತಹ ಯಾವುದಾದರೊಂದು ಆಶ್ರಯ ಸಮಿತಿಯ ಸದಸ್ಯರಾಗಬಹುದು.

೫. ಒಂದೇ ಆಶ್ರಯ ಸಮಿತಿಯನ್ನು ಒಂದಕ್ಕಿಂತ ಹೆಚ್ಚು ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿಕೊಂಡ ಸಮಯದಲ್ಲಿ ಸರ್ಕಾರವು ವಿಧಾನ ಪರಿಷತ್ ಸದಸ್ಯರನ್ನು ಯಾವ ಆಶ್ರಯ ಸಮಿತಿಗೆ ನಾಮ ನಿರ್ದೇಶನ ಮಾಡಬೇಕೆಂದು ಸರ್ಕಾರವೇ ನಿರ್ದೇಶಿಸುವುದು ಹಾಗೂ ಸರ್ಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.

ಆದಾಗ್ಯೂ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಆಶ್ರಯ ಸಮಿತಿಗಳನ್ನು ತಾಲ್ಲೂಕುವಾರು ಸಮಿತಿಗಳನ್ನಾಗಿ ರಚಿಸತಕ್ಕದ್ದು. ಚಿಕ್ಕಮಗಳೂರು ಜಿಲ್ಲೆಯ ಇನ್ನುಳಿದ ಪ್ರದೇಶಗಳಲ್ಲಿ ವಿಧಾನ ಸಭಾ ಕ್ಷೇತ್ರವಾರು ಆಶ್ರಯ ಸಮಿತಿಗಳನ್ನು ರಚಿಸತಕ್ಕದ್ದು.

ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯು ಒಂದಕ್ಕಿಂತ ಹೆಚ್ಚು ತಾಲ್ಲೂಕುಗಳನ್ನು ಹೊಂದಿರುವುದರಿಂದ ಆಶ್ರಯ ಸಮಿತಿಗಳನ್ನು ತಾಲ್ಲೂಕುವಾರು ಸಮಿತಿಗಳನ್ನಾಗಿ ರಚಿಸತಕ್ಕದ್ದು.

ಮುಖ್ಯ ಮಂತ್ರಿಗಳು, ಸಚಿವರು, ವಿಧಾನ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ಕಾರದ ಮುಖ್ಯ ಸಚೇತಕರು ತಾವು ವೈಯುಕ್ತಿಕವಾಗಿ ಆಶ್ರಯ ಸಮಿತಿಗೆ ಅಧ್ಯಕ್ಷರಾಗಲು ಇಚ್ಛಿಸದೇ ಇದ್ದಲ್ಲಿ, ಅವರಿಂದ ನಾಮ ನಿರ್ದೇಶನ ಮಾಡಲ್ಪಡುವವರು ಅಂತಹ ಕ್ಷೇತ್ರದ ಆಶ್ರಯ ಸಮಿತಿಗೆ ಅಧ್ಯಕ್ಷರಾಗಿರುತ್ತಾರೆ.

ಆಶ್ರಯ ಸಮಿತಿಯ ಅಧ್ಯಕ್ಷರ ಮತ್ತು ಅಧಿಕಾರೇತರ ಸದಸ್ಯರುಗಳ ಅವಧಿಯು ಸರ್ಕಾರದ ಇಚ್ಛಾನುಗುಣವಾಗಿ ಇರುತ್ತದೆ. ಯಾವುದೇ ಕ್ಷೇತ್ರದಲ್ಲಿ ವಿಧಾನ ಸಭಾ ಸದಸ್ಯರು ಇಲ್ಲದೇ ತೆರವಾಗಿದ್ದ ಪಕ್ಷದಲ್ಲಿ ಸರ್ಕಾರವು ಅಧ್ಯಕ್ಷರನ್ನು ನಾಮನಿರ್ದೇಶನ ಮಾಡುವುದು.

<u>ಆಶ್ರಯ ಸಮಿತಿಯ ಅಧಿಕಾರ ಮತ್ತು ಕರ್ತವ್ಯಗಳು ಈ ಕೆಳಕಂಡಂತಿವೆ:—</u>

೧. ಸಮಿತಿಯು ಆಶ್ರಯ ನಿವೇಶನ ಮತ್ತು ಮನೆಗಳ ಯೋಜನೆಗಾಗಿ ಡಾ: ಅಂಬೇಡ್ಕರ್ ವಸತಿ ಯೋಜನೆ ಹಾಗೂ ನೆರಳಿನ ಭಾಗ್ಯ ಯೋಜನೆಗಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

೨. ಸಮಿತಿಯು ಗ್ರಾಮ ಸಭೆ ಅಥವಾ ಮುನಿಸಿಪಾಲಿಟಿಯು ಸಿದ್ಧಪಡಿಸಿದ ನಿವೇಶನ ರಹಿತ ಮತ್ತು ವಸತಿರಹಿತರ ಪಟ್ಟಿಯ ಆಧಾರದ ಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಗ್ರಾಮ ಸಭೆ ಮತ್ತು ಮುನಿಸಿಪಲ್ ಸಂಸ್ಥೆಗಳು ಯಾವುದೇ ಗ್ರಾಮ ಅಥವಾ ಪಟ್ಟಣಕ್ಕೆ ಮಂಜೂರು ಮಾಡಿದ ಮನೆಗಳು ಎಷ್ಟೇ ಇದ್ದರೂ, ಅವರುಗಳು ವಸತಿರಹಿತರ ಮತ್ತು ನಿವೇಶನರಹಿತರ ಪೂರ್ಣ ಪ್ರಮಾಣದ ಪಟ್ಟಿಯನ್ನು ಆಶ್ರಯ ಸಮಿತಿಯು ಆಗಿಂದಾಗ್ಗೆ ಕೇಳಿದಾಗ ಒದಗಿಸಬೇಕು.

೩. ಸಮಿತಿಯು ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರು ಮಾಡಿದ ಮನೆಗಳನ್ನು ಗ್ರಾಮಗಳಿಗೆ ಹಂಚಿಕೆ ಮಾಡುವುದು.

೪. ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಸಭೆ ಸೇರುವುದು .

೫. ಆಶ್ರಯ ಯೋಜನೆಯಡಿ ಮಂಜೂರಾದ ಫಲವನ್ನು ತದನಂತರ ಯಾವುದೇ ವಂಚನೆ ಹಾಗೂ ಹಾನಿ, ಸಮಿತಿಯಿಂದ ಪತ್ತೆ ಹಚ್ಚಲ್ಪಟ್ಟಲ್ಲಿ, ಸದರಿ ಫಲವನ್ನು ರದ್ದುಗೊಳಿಸುವ ಅಧಿಕಾರವನ್ನು ಸಮಿತಿಯು ಹೊಂದಿರುತ್ತದೆ.

ಆಶ್ರಯ ನಿವೇಶನ ಮತ್ತು ಮನೆಗಳಲ್ಲಿ ಶೇ ೩೦ ರಷ್ಟನ್ನು ಪರಿಶಿಷ್ಟ ಜಾತಿಯವರಿಗೆ ಹಾಗೂ ಶೇ ೩ ರಷ್ಟನ್ನು ಪರಿಶಿಷ್ಟ ಪಂಗಡದವರಿಗೆ ಹಂಚಿಕೆ ಮಾಡಲು ಮೀಸಲಿಡುವುದು. ಉಳಿದ ಶೇ ೬೭ ರಷ್ಟನ್ನು ಇತರೇ ವರ್ಗದವರಿಗೆ ಅಂತಹ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಸಮಿತಿಯು ಹಂಚಿಕೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

( ಬಿ.ಎಸ್.ಜಾಪಾಲಿ )
ಸರ್ಕಾರದ ಅಧೀನ ಕಾರ್ಯದರ್ಶಿ
ವಸತಿ ಇಲಾಖೆ

<u>ಗೆ:</u>

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರದಲ್ಲಿ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ ಹಾಗೂ ೫೦೦ ಪ್ರತಿಗಳನ್ನು ವಸತಿ ಇಲಾಖೆ, ೩ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸುವುದು.

೧) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು

೨) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ : ಕಾರ್ಯದರ್ಶಿಗಳಿಗೆ

೩) ಎಲ್ಲಾ ವಿಭಾಗಾಧಿಕಾರಿಗಳಿಗೆ

೪) ವ್ಯವಸ್ಥಾಪಕ ನಿರ್ದೇಶಕರು, ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ, ಕಾವೇರಿ ಭವನ ಬೆಂಗಳೂರು

೫) ನಿರ್ದೇಶಕರು, ಸಮಾಜ ಕಲ್ಯಾಣ : ಗಿರಿಜನ ಕಲ್ಯಾಣ ಇಲಾಖೆ

೬) ಎಲ್ಲಾ ಜಿಲ್ಲಾಧಿಕಾರಿಗಳು

೭) ಜಿಲ್ಲಾ ಪಂಚಾಯತ್‌ನ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ

೮) ಎಲ್ಲಾ ವಿಧಾನಸಭಾ ಸದಸ್ಯರು : ವಿಧಾನ ಪರಿಷತ್ ಸದಸ್ಯರು

೯) ಸಚಿವ ಸಂಪುಟ ಶಾಖೆ — ಉಲ್ಲೇಖ :ಸಿ–೫೨೬:೯೯ ಮತ್ತು ಸಿ–೧೫೭:೨೦೦೦

೧೦) ಮಾನ್ಯ ಮುಖ್ಯಮಂತ್ರಿಗಳ ಅಪ್ತ ಕಾರ್ಯದರ್ಶಿ, ವಿಧಾನ ಸೌಧ,ಬೆಂಗಳೂರು

೧೧) ಮಾನ್ಯ ವಸತಿ ಸಚಿವರ ಅಪ್ತ ಕಾರ್ಯದರ್ಶಿಗಳು, ವಿಧಾನ ಸೌಧ,ಬೆಂಗಳೂರು

೧೨) ಎಲ್ಲಾ ಸಚಿವರುಗಳ ಅಪ್ತ ಕಾರ್ಯದರ್ಶಿಗಳಿಗೆ, ವಿಧಾನ ಸೌಧ,ಬೆಂಗಳೂರು

೧೩) ಅಪರ ಮುಖ್ಯ ಕಾರ್ಯದರ್ಶಿಗಳ ಅಪ್ತ ಕಾರ್ಯದರ್ಶಿಗಳು ( ಲೋಕೋಪಯೋಗಿ ಮತ್ತು ವಸತಿ ) ಬೆಂಗಳೂರು

೧೪) ಪ್ರಧಾನ ಕಾರ್ಯದರ್ಶಿಗಳು, ಪತ್ರಾಂಕಿತ ಅಪ್ತ ಸಹಾಯಕರು, ವಸತಿ ಇಲಾಖೆ

೧೫) ಉಪ ಕಾರ್ಯದರ್ಶಿಗಳ ಅಪ್ತ ಸಹಾಯಕರು, ವಸತಿ ಇಲಾಖೆ

೧೬) ಹೆಚ್ಚುವರಿ ಪ್ರತಿ : ಶಾಖಾ ರಕ್ಷಾ ಕಡತ